



# ಹದಿನೇಳೆಂಟರ ತಳಮಳಕ್ಕೆ ಕನ್ನಡಿ

'ರೈಲ್ವೆ ಚಿಲ್ಡ್ರನ್', 'ಪಿಂಕಿ ಎಲ್ಲಿ?' ಸಿನಿಮಾಗಳ ಮೂಲಕ ಗಮನಸೆಳೆದಿರುವ ಪೃಥ್ವಿ ಕೊಣನೂರು ಈಗ 'ಹದಿನೇಳೆಂಟು' ಸಿನಿಮಾದ ಮೂಲಕ ಮತ್ತೆ ಪ್ರೇಕ್ಷಕರ ಎದುರಿಗೆ ಬರುತ್ತಿದ್ದಾರೆ. ಇದರಲ್ಲಿ ಹದಿಹರೆಯದವರ ಲೋಕದ ತಲ್ಲಣಗಳನ್ನು ತೆರೆಯ ಮೇಲೆ ಕಟ್ಟಿಕೊಡುವ ಪ್ರಯತ್ನವನ್ನು ಅವರು ಮಾಡಿದ್ದಾರೆ.

■ ಪದ್ಮನಾಭ ಭಟ್



'ನಾನು ಸೋತಾಗ ಮಾತನಾಡುವುದಿಲ್ಲ. ಆಗ ಮಾತಾಡಿದರೆ ಬೆಲೆಯೂ ಇರುವುದಿಲ್ಲ. ಗೆದ್ದಾಗಲೇ ಮಾತಾಡುವವನು ನಾನು' ಹೀಗೆ ಸ್ಪಷ್ಟವಾಗಿ ಹೇಳಿದರು ಪೃಥ್ವಿ ಕೊಣನೂರು. ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿ ಅವರ ನಿರ್ದೇಶನದ 'ಪಿಂಕಿ ಎಲ್ಲಿ?' ಪ್ರದರ್ಶನ ಕಂಡಿತ್ತು; ಪ್ರಶಸ್ತಿಯನ್ನೂ ಪಡೆದಿತ್ತು. ಆಗ ಪೃಥ್ವಿ ಬೆಂಗಳೂರು ಸಿನಿಮೋತ್ಸವದಲ್ಲಿನ ಓರೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು.

'ರೈಲ್ವೇ ಚಿಲ್ಡ್ರನ್' ಮೂಲಕ ಗಮನಸೆಳೆದಿದ್ದ ಪೃಥ್ವಿ, ರಿಯಲಿಸ್ಟಿಕ್ ತಳಹದಿಯಲ್ಲಿಯೇ ಸಿನಿಮಾ ಕಟ್ಟುವ ವಿಶಿಷ್ಟ ಶೈಲಿಯನ್ನು ಸಿದ್ಧಿಸಿಕೊಂಡಿರುವವರು. ಈಗ ಪೃಥ್ವಿ 'ಹದಿನೇಳೆಂಟು' ಎಂಬ ಹೊಸ ಸಿನಿಮಾದೊಂದಿಗೆ ಜನರೆದುರು ಬರುತ್ತಿದ್ದಾರೆ. ಈ ಸಲದ ಬೂಸಾನ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ವರ್ಲ್ಡ್ ಪ್ರೀಮಿಯರ್ ಆಗುತ್ತಿದೆ.

ಹೆಸರೇ ಹೇಳುವ ಹಾಗೆ ಹದಿಹರೆಯದ ಹುಡುಗ/ಹುಡುಗಿಯರ ಕಥೆಯನ್ನು ಈ ಸಿನಿಮಾ ಮೂಲಕ ಅವರು ತೆರೆದಿಡುತ್ತಿದ್ದಾರೆ. 'ಹುಡುಗ–ಹುಡುಗಿಯ ಸೆಲ್ಫ್ ಸೆಕ್ಸ್ ವಿಡಿಯೊ ಲೀಕ್ ಆಗುತ್ತದೆ. ಅದರ ಪರಿಣಾಮಗಳ ಬೇರೆ ಬೇರೆ ಸಂದರ್ಭಗಳನ್ನು ಇಟ್ಟುಕೊಂಡು ಕಟ್ಟಿಕೊಡುವ ಪ್ರಯತ್ನವನ್ನು ಈ ಸಿನಿಮಾ ಮಾಡುತ್ತದೆ. ಈ ವಿಷಯ ಕಳೆದ ಐದು ವರ್ಷಗಳಿಂದಲೂ ನನ್ನ ಮನಸಲ್ಲಿತ್ತು. ಸುಮಾರು ನಲ್ವತ್ತೈವತ್ತು ಸಲ ಸ್ಕ್ರಿಪ್ಟ್ ತಿದ್ದಿದ್ದೇನೆ. ಆದರೂ ಹೇಗೆ ಕೊನೆಗೊಳಿಸಬೇಕು ಎಂಬುದು ತಿಳಿಯುತ್ತಿರಲಿಲ್ಲ. ಕೊನೆಗೆ ಇದಕ್ಕೆ ಎಂಡಿಂಗ್ ಹುಡುಕಬಾರದು, ಒಂದು ದಿಕ್ಕನ್ನು ತೋರಿಸಿ ನಿಲ್ಲಿಸಿಬಿಡಬೇಕು ಎಂದು ಅನಿಸಿತು. ಹಾಗಾಗಿ ಅದೇ ರೀತಿಯಲ್ಲಿ ಸಿನಿಮಾ ಕಟ್ಟಿದ್ದೇನೆ' ಎಂದು ವಿವರಿಸುತ್ತಾರೆ ಪೃಥ್ವಿ.

ಅವರ ಬಹುತೇಕ ಎಲ್ಲ ಸಿನಿಮಾಗಳಲ್ಲಿಯೂ ಒಂದಿಷ್ಟು ಹೊಸ ಕಲಾವಿದರು ಇರುತ್ತಾರೆ. ಈ ಸಿನಿಮಾದಲ್ಲಿಯೂ ಹೊಸ ಕಲಾವಿದರೇ ಹೆಚ್ಚಿದ್ದಾರಂತೆ. ಜೊತೆಗೆ ಹಲವು ಅನುಭವಿ ಕಲಾವಿದರ ಹಾಜರಿಯೂ ಇದೆ.

'ನಾನು ಕಲಾವಿದರನ್ನು ಆಯ್ಕೆ ಮಾಡಿಕೊಳ್ಳಲು ವಿಶೇಷ ತಂತ್ರಗಳನ್ನೇನೂ ಅನುಸರಿಸುವುದಿಲ್ಲ. ಆಡಿಷನ್ ಮಾಡುತ್ತೇನೆ. ಅಲ್ಲಿಗೆ ಬಂದ ಕಲಾವಿದರಲ್ಲಿ ಯಾರು ನನ್ನ ಪಾತ್ರಕ್ಕೆ ಹೊಂದುತ್ತಾರೋ ಎಂದು ನೋಡಿ ಆಯ್ಕೆ ಮಾಡಿಕೊಳ್ಳುತ್ತೇನೆ' ಎಂದು ವಿವರಿಸುತ್ತಾರೆ.

'ನಾನು ರಿಯಲಿಸ್ಟಿಕ್ ಮಾದರಿಯಲ್ಲಿ ಸಿನಿಮಾ ಕಟ್ಟುವವನು. ಒಬ್ಬ ಫಿಲ್ಮ್ ಮೇಕರ್ ಆಗಿ, ಫಿಲ್ಮ್ ಲವರ್ ಆಗಿ ಆ ಮಾದರಿ ನನ್ನೊಳಗೆ ವಿಕಾಸಗೊಳ್ಳುತ್ತ ಬಂದಿದೆ. ಬಜೆಟ್ ಕೂಡ ಸೇರಿದಂತೆ ನನಗೆ ಸಿನಿಮಾ ಮಾಡುವಾಗ ಕೆಲವು ಲಿಮಿಟೇಷನ್‌ಗಳು ಇವೆ. ಅಲ್ಲದೆ ನಾನು ಹೇಳುತ್ತಿರುವುದು ನಿರ್ದಿಷ್ಟವಾಗಿ ಸಮಕಾಲೀನ ನಗರದ ಕಥೆಗಳು. ಅವುಗಳನ್ನು ಹೀಗೆಯೇ, ಇಷ್ಟು ರಿಯಲಿಸ್ಟಿಕ್ ಆಗಿಯೇ ಹೇಳಬೇಕು. ಇಲ್ಲದಿದ್ದರೆ ಅವು ಕೆಲಸವೇ ಮಾಡುವುದಿಲ್ಲ. ಹಾಗಾಗಿ ಅದೇ ರೀತಿಯಲ್ಲಿ ಹೇಳಬೇಕು' ಎನ್ನುತ್ತಾರೆ ಪೃಥ್ವಿ.

ಈ ವರ್ಷದ ಏಷ್ಯನ್ ಪ್ರಾಜೆಕ್ಟ್ ಮಾರ್ಕೆಟ್‌ಗೆ ಅವರ ಇನ್ನೊಂದು ಸ್ಕ್ರಿಪ್ಟ್ ಕೂಡ ಆಯ್ಕೆಯಾಗಿದೆ. ಹಲವು ಅಂತರರಾಷ್ಟ್ರೀಯ ಸಿನಿಮಾಗಳನ್ನು ಪೃಥ್ವಿ ಅವರ ಸಿನಿಮಾಗಳು ಪ್ರದರ್ಶನ ಕಂಡು ಮೆಚ್ಚುಗೆ–ಪ್ರಶಸ್ತಿಗಳನ್ನೂ ಪಡೆದುಕೊಂಡಿವೆ. ಆದರೆ ಪ್ರಶಸ್ತಿಗಳ ಬಗ್ಗೆ ವಸ್ತುನಿಷ್ಠವಾಗಿ ಮಾತಾಡಲು ಅವರಿಗೆ ಯಾವ ಹಿಂಜರಿಕೆಯೂ ಇಲ್ಲ. 'ಪ್ರಶಸ್ತಿಗಳು ಒಂದು ಸಿನಿಮಾದ ಯಶಸ್ಸನ್ನು ನಿರ್ಧರಿಸುವ ಮಾನದಂಡ ಆಗಬೇಕಿಲ್ಲ. ಪ್ರಶಸ್ತಿ ಎನ್ನುವುದು ಆಯಾ ಸಂದರ್ಭದ ನಿರ್ಣಾಯಕರ ಮೇಲೆ ಅವರ ಮನಸ್ಥಿತಿಯ ಮೇಲೆ ನಿರ್ಧರಿತವಾಗುವುದು. ಅಲ್ಲದೆ ಎಷ್ಟೋ ಚಿತ್ರೋತ್ಸವಗಳೇ ಈಗ ನಿರ್ದಿಷ್ಟ ಅಜೆಂಡಾವನ್ನು ಹೊಂದಿರುತ್ತವೆ. ಹಾಗಿರುವಾಗ ಪ್ರಶಸ್ತಿಯನ್ನು ಸಿನಿಮಾದ ಯಶಸ್ಸಿಗೆ ಹೇಗೆ ಮಾನದಂಡವಾಗಿ ನೋಡುವುದು?' ಎನ್ನುವ ಅವರು ಕೊನೆಗೂ ಒಂದು ಅಭಿವ್ಯಕ್ತಿ ಮಾಧ್ಯಮವಾಗಿ ಸಿನಿಮಾವನ್ನು ಕಂಡು ಅದನ್ನು ತಮ್ಮ ಶೋಧನೆಯ ಸಾಧನವಾಗಿ ಬಳಸಿಕೊಂಡು ಸಿನಿಮಾ ಮಾಡುತ್ತ ಹೋಗುವುದೇ ಮುಖ್ಯ ಎಂದು ನಂಬುತ್ತಾರೆ. ■